Jyothisha Mithra

# ಜ್ಯೋತಿಷ ಮಿತ್ರ

www.jyothishamithra.com

## ಗುರು ಗೋಚಾರ ಫಲ

**2-6-2026 ರಿಂದ 31-10-2026**

ಭಾರತೀಯ ಜ್ಯೋತಿಷ ಶಾಸ್ತ್ರದ ಪ್ರಕಾರ ಗುರುಗ್ರಹವೆಂದರೆ ದೇವತೆಗಳ ಗುರು. ಈತನ ಇನ್ನೊಂದು ಹೆಸರು ಬೃಹಸ್ಪತಿ.



ಗುರುಗ್ರಹವು ಪ್ರತಿಯೊಬ್ಬರ ಜೀವನದಲ್ಲೂ ಧನ, ಆನಂದ, ನೆಮ್ಮದಿ, ಗೆಲುವು, ಹೆಸರು, ಖ್ಯಾತಿ, ಪ್ರಖ್ಯಾತಿಯನ್ನು ಅನುಗ್ರಹಿಸುವನು.

ಲೇಖಕರು : ಶ್ರೀಷ ಎಸ್(ಸಂಪಾದಕರು)

ಗುರುವೆಂದರೆ ಪರಿಪೂರ್ಣ ಆನಂದದ ಸಂಕೇತ ಮಾತ್ರವಲ್ಲದೇ ದೇವತಾ ಗುಣದ ಸಂಕೇತ.

ಜ್ಞಾನಕಾರಕನಾದ ಗುರುಗ್ರಹನು ದೇವಮಂತ್ರಿಯೆಂದೇ ಪ್ರಸಿದ್ಧನಾಗಿದ್ದಾನೆ. ದೇವತೆಗಳ ರಕ್ಷಣೆಗೋಸ್ಕರ ಜ್ಞಾನ, ಮಂತ್ರಸಿದ್ಧಿ, ಅನುಷ್ಠಾಣಾಕ್ಕೋಸ್ಕರ ಬೃಹಸ್ಪತಿಯು ರುದ್ರ ದೇವರಿಂದ ಗುರುಸ್ಥಾನದಲ್ಲಿ ನಿಯೋಜಿಸಲ್ಪಟ್ಟನು.

ಜಾತಕದಲ್ಲಿ ಗುರು ಬಲಿಷ್ಠನಾಗಿದ್ದರೆ ಒಂದು ಲಕ್ಷ ದೋಷಗಳನ್ನು ನಿವಾರಿಸುವನು. ಗುರುಗ್ರಹ ಯಾರದೇ ಜಾತಕದಲ್ಲಿ ಬಲಹೀನನಾಗಿದ್ದರೆ ಬಹು ದೊಡ್ಡ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.




ಶೈವರು ಗುರುವನ್ನು ದಕ್ಷಿಣಾಮೂರ್ತಿಯಾಗಿ ಪೂಜಿಸಿದರೆ, ವೈಷ್ಣವರು ಗುರುವನ್ನು ವಿಷ್ಣುವಿನ ರೂಪದಲ್ಲಿ ಪೂಜಿಸುವರು.

## ಹನ್ನೆರಡು ವರ್ಷಕ್ಕೊಮ್ಮೆ ಗುರುಗ್ರಹ ಉಚ್ಚನಾಗುವನು

ದೈವಾನುಗ್ರಹ(ಗುರುಬಲ) ಸೂಚಕನಾದ ಗುರುಗ್ರಹ ದಿನಾಂಕ 2-6-2026 ರಿಂದ 31-10-2026 ವರೆಗೆ ತನ್ನ ಉಚ್ಚಕ್ಷೇತ್ರವಾದ ಕರ್ಕಾಟಕ ರಾಶಿಯಲ್ಲಿ ಸಂಚಾರ ಮಾಡುವನು. ಗುರುಗ್ರಹ ಹನ್ನೆರಡು ವರ್ಷಕ್ಕೊಮ್ಮೆ ಉಚ್ಚನಾಗುವನು.

ಜ್ಞಾನ, ಧನ, ಕುಟುಂಬ, ಆಧ್ಯಾತ್ಮ, ದೇವರು, ಭಕ್ತಿ ಸಾತ್ವಿಕಗುಣ, ನ್ಯಾಯ, ಸತ್ಯ, ಧರ್ಮ, ಮಂತ್ರ, ಪದವಿ, ಸಕಾರಾತ್ಮ ಆಲೋಚನೆ, ತೀರ್ಥಯಾತ್ರೆ ಇವುಗಳಿಗೆ ಗುರುಗ್ರಹ ಕಾರಕನು.

ಕರ್ಕಾಟಕ ರಾಶಿಯಲ್ಲಿ ಸಂಚಾರ ಮಾಡುವ ಉಚ್ಚ ಗುರುವು ತನ್ನ ಐದನೇ ದೃಷ್ಟಿಯಿಂದ ವೃಶ್ಚಿಕರಾಶಿಯನ್ನು, ಸಪ್ತಮ ದೃಷ್ಟಿಯಿಂದ ಮಕರ ರಾಶಿಯನ್ನು, ನವಮ ದೃಷ್ಟಿಯಿಂದ ಮೀನರಾಶಿಯನ್ನು ವೀಕ್ಷಿಸುವನು.




www.jyothishamithra.com

## ಏನೆಲ್ಲಾ ಘಟನೆಗಳು ಸಂಭವಿಸಬಹುದು ?

- ಆಧ್ಯಾತ್ಮ ಸಾಧನೆ ಮಾಡುವವರ ಸಂಖ್ಯೆ ಹೆಚ್ಚಾಗುವುದು.
- ಹೆಚ್ಚಿನ ಸಂಖ್ಯೆಯಲ್ಲಿ ಜನರು ತೀರ್ಥಯಾತ್ರೆ ಮಾಡುವರು.
- ಜನಸಾಮಾನ್ಯರಲ್ಲಿ ಸಾತ್ವಿಕಗುಣ ಹೆಚ್ಚಾಗುವುದು.

- ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಯಾಗುವುದು.
- ಉತ್ತರದ ರಾಜ್ಯಗಳಲ್ಲಿ ವಿಪರೀತ ಮಳೆಯಾಗುವುದು.
- ಶೀತ-ಕಫ-ಜ್ವರದ ಸಮಸ್ಯೆಯಿಂದ ಬಳಲುವವರ ಸಂಖ್ಯೆ ಹೆಚ್ಚಾಗುವುದು.

www.jyothishamithra.com

- ಮೇಷ, ಮಿಥುನ, ಕರ್ಕಾಟಕ, ಕನ್ಯಾ, ತುಲಾ, ವೃಶ್ಚಿಕ, ಮಕರ ಮತ್ತು ಮೀನ ರಾಶಿಯಲ್ಲಿ ಹುಟ್ಟಿದವರಿಗೆ ಶುಭಫಲ ಲಭಿಸುವುದು.

# ದ್ವಾದಶ ರಾಶಿಗಳ ಗುರು ಗೋಚಾರ ಫಲ

## ಮೇಷರಾಶಿ



ಮೇಷರಾಶಿಯಲ್ಲಿ ಜನಿಸಿದ ಸಂಜಾತರಿಗೆ ಗುರುಗ್ರಹ ನವಮ ಮತ್ತು ದ್ವಾದಶಾಧಿಪತಿಯಾಗಿರುವನು. ರಾಶ್ಯಾಧಿಪತಿಗೆ ಮಿತ್ರನಾಗಿ ತನ್ನ ಉಚ್ಚಕ್ಷೇತ್ರವಾದ ಚತುರ್ಥ

ಭಾವದಲ್ಲಿ ಸಂಚಾರ ಮಾಡುವನು. ಅಷ್ಟಮ, ದಶಮ ಮತ್ತು ದ್ವಾದಶ ಭಾವವನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

www.jyothishamithra.com

- ಭಾಗ್ಯೋದಯವಾಗುವುದು.
- ವಾಹನ/ಭೂಮಿ/ಗೃಹ ಖರೀದಿಸುವಿರಿ.
- ಪಿತ್ರಾರ್ಜಿತ ಆಸ್ತಿ ಲಭಿಸುವುದು.
- ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು.
- ತಂದೆಯಿಂದ ಲಾಭವಾಗುವುದು.
- ನಿಮ್ಮ ಮಾತೃವಿಗೆ ಶೀತ, ಕಫ, ಉಸಿರಾಟದ ಸಮಸ್ಯೆಗಳು ಬಾಧಿಸುವುದು.
- ಧಾರ್ಮಿಕ ಕ್ಷೇತ್ರಗಳಿಗೆ ಪ್ರವಾಸ ಹೋಗುವಿರಿ.
- ಮಾಡುತ್ತಿರುವ ವೃತ್ತಿಯಲ್ಲಿ ಧನಾತ್ಮಕವಾದ ಬದಲಾವಣೆಯಾಗುವುದು.
- ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವುದು.
- ಸಮಾಜದ ಗೌರವಕ್ಕೆ ಪಾತ್ರರಾಗುವಿರಿ.
- ರಾಜಕಾರಣಿಗಳು ಶುಭ ಸುದ್ದಿ ಕೇಳುವಿರಿ.

- ನಿಮ್ಮ ಆರೋಗ್ಯ ಸಮಸ್ಯೆಗಳು ದೂರವಾಗುವುದು.
- ಕೋರ್ಟ್ ತೀರ್ಪು ನಿಮ್ಮ ಪರವಾಗಿ ಬರುವುದು.
- ನಿಮ್ಮನ್ನು ಹೆಚ್ಚಾಗಿ ಆಧ್ಯಾತ್ಮದಲ್ಲಿ ತೊಡಗಿಸಿಕೊಳ್ಳುವಿರಿ.

# ಪರಿಹಾರ

www.jyothishamithra.com

- ಸುಬ್ರಹ್ಮಣ್ಯ ದೇವರನ್ನು ಆರಾಧಿಸಬೇಕು.
- ತೋರ್ ಬೆರಳಿಗೆ ಹವಳವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.



# ವೃಷಭ ರಾಶಿ



ವೃಷಭ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ಅಷ್ಟಮಾಧಿಪತಿ ಮತ್ತು ಏಕದಶಾಧಿಪತಿಯಾಗಿರುವನು. ಗುರುಗ್ರಹ ತೃತೀಯ ಭಾವದಲ್ಲಿ ರಾಶ್ಯಾಧಿಪತಿ ಶುಕ್ರನಿಗೆ ಶತ್ರುವಾಗಿ ತನ್ನ ಉಚ್ಛಕ್ಷೇತ್ರವಾದ ಕರ್ಕಾಟಕ ರಾಶಿಯಲ್ಲಿ ಸಂಚಾರ ಮಾಡುವನು. ಸಪ್ತಮ, ನವಮ ಮತ್ತು ಏಕದಶಾ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

www.jyothishamithra.com

- ವಿಶೇಷವಾಗಿ ಧನಲಾಭ ಆಗುವುದು.
- ಒಳ್ಳೆಯ ಉದ್ಯೋಗ ಲಭಿಸುವುದು.
- ರಾಜಕಾರಣಿಗಳಿಗೆ ಅಧಿಕಾರ ಪ್ರಾಪ್ತಿಯಾಗುವುದು.
- ಆಧ್ಯಾತ್ಮ ಸಾಧನೆ ಮಾಡುವಿರಿ.
- ಧಾರ್ಮಿಕ ಕ್ಷೇತ್ರಗಳಿಗೆ ದೂರ ಪ್ರಯಾಣ ಮಾಡುವಿರಿ.

- ತಂದೆಯಿಂದ ಲಾಭವಾಗುವುದು.
- ಹೊಸ ವ್ಯಾಪಾರ, ವ್ಯವಹಾರ ಆರಂಭಿಸಲು ಇದು ಸಕಾಲವಾಗಿದೆ.
- ವ್ಯಾಪಾರ, ವ್ಯವಹಾರ ಮಾಡುತ್ತಿರುವವರಿಗೆ ಅಧಿಕ ಲಾಭವಾಗುವುದು.

www.jyothishamithra.com

- ಸಹೋದರ / ಸಹೋದರಿಯೊಂದಿಗೆ ಕಲಹ ಉಂಟಾಗುವ ಸಾಧ್ಯತೆಯಿದೆ.
- ವಿವಾಹವಾಗಲು ಪ್ರಯತ್ನಿಸುತ್ತಿರುವವರಿಗೆ ವಿವಾಹವಾಗುವುದು.
- ಬಾಳಸಂಗಾತಿಯಿಂದ ಮತ್ತು ಮಿತ್ರರಿಂದ ಲಾಭವಾಗುವುದು.
- ಕುತ್ತಿಗೆಯ ಭಾಗದಲ್ಲಿ ಅನಾರೋಗ್ಯ ಸಮಸ್ಯೆ ಉಂಟಾಗುವ ಸಾಧ್ಯತೆಯಿದೆ.

# ಪರಿಹಾರ

- ದುರ್ಗಾ ದೇವಿಯನ್ನು ಆರಾಧಿಸಬೇಕು.
- ಮಧ್ಯ ಬೆರಳಿಗೆ ವಜ್ರ ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.

# ಮಿಥುನರಾಶಿ



www.jyothishamithra.com

ಮಿಥುನ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ಸಪ್ತಮ ಮತ್ತು ದಶಮಾಧಿಪತಿಯಾಗಿರುವನು(ಕೇಂದ್ರಸ್ಥಾನ). ಗುರುಗ್ರಹ ದ್ವಿತೀಯ ಭಾವದಲ್ಲಿ ರಾಶ್ಯಾಧಿಪತಿ ಬುಧನಿಗೆ ಶತ್ರುವಾಗಿ ತನ್ನ ಉಚ್ಚಕ್ಷೇತ್ರವಾದ ಕರ್ಕಾಟಕ ರಾಶಿಯಲ್ಲಿ ಸಂಚಾರ ಮಾಡುವನು. ಷಷ್ಟ ಅಷ್ಟಮ ಮತ್ತು ದಶಮ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

➢ ವಿಪರೀತ ಧನಲಾಭವಾಗುವುದು.

- ಕೌಟುಂಬಿಕ ಸಮಸ್ಯೆಗಳು ದೂರವಾಗುವುದು.
- ವಾಕ್ ಸಿದ್ಧಿಯಾಗುವುದು.
- ಆರೋಗ್ಯ ಸಮಸ್ಯೆಗಳು ದೂರವಾಗುವುದು.
- ವಿವಾಹವಾಗಲು ಬಯಸುತ್ತಿರುವವರಿಗೆ ವಿವಾಹಯೋಗ ಕೂಡಿಬರುವುದು.
- ಹೊಸ ವ್ಯಾಪಾರ, ವ್ಯವಹಾರ ಆರಂಭಿಸಲು ಇದು ಸಕಾಲವಾಗಿದೆ.

www.jyothishamithra.com

- ಮಾಡುತ್ತಿರುವ ವೃತ್ತಿಯಲ್ಲಿ ಧನಾತ್ಮಕವಾದ ಬದಲಾವಣೆಯಾಗುವುದು.
- ಧಾರ್ಮಿಕ ಕ್ಷೇತ್ರಗಳಿಗೆ ಪ್ರವಾಸ ಹೋಗುವಿರಿ.
- ಬಾಳಸಂಗಾತಿಯಿಂದ ಧನಲಾಭವಾಗುವುದು
- ರಾಜಕಾರಣಿಗಳಿಗೆ ಅಧಿಕಾರ ಪ್ರಾಪ್ತಿಯಾಗುವುದು.
- ವೃತ್ತಿ ಸಲುವಾಗಿ ದೂರ ಪ್ರಯಾಣ ಮಾಡುವಿರಿ.
- ಮಿತ್ರರಿಂದ ಲಾಭವಾಗುವುದು.
- ಸಮಾಜದ ಗೌರವಕ್ಕೆ ಪಾತ್ರರಾಗುವಿರಿ.

# ಪರಿಹಾರ

- ವಿಷ್ಣು ದೇವರನ್ನು ಆರಾಧಿಸಬೇಕು.
- ಉಂಗುರ ಬೆರಳಿಗೆ ಪಚ್ಚೆ ರತ್ನವನ್ನು ಧಾರಣೆ ಮಾಡಬೇಕು.

www.jyothishamithra.com

- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.

# ಕರ್ಕಾಟಕರಾಶಿ



ಕರ್ಕಾಟಕ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ಷಷ್ಟ ಮತ್ತು ನವಮಾಧಿಪತಿಯಾಗಿರುವನು. ರಾಶ್ಯಾಧಿಪತಿ ಚಂದ್ರ ಮತ್ತು ಗುರು ಶತ್ರುಗಳು. ಗುರುಗ್ರಹ ಉಚ್ಚನಾಗಿ ಜನ್ಮ ರಾಶಿಯಲ್ಲಿ ಸಂಚಾರ ಮಾಡುವನು. ಪಂಚಮ, ಸಪ್ತಮ ಮತ್ತು ನವಮ ಭಾವಗಳನ್ನು ತನ್ನ ಶುಭ

ದೃಷ್ಟಿಯಿಂದ ವೀಕ್ಷಿಸುವನು.

- ಭಾಗ್ಯೋದಯವಾಗುವುದು, ಧನ ಲಾಭವಾಗುವುದು.
- ಕೈ ಹಾಕಿದ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುದು.
- ವಿವಾಹಯೋಗ, ಸಂತಾನಯೋಗ ಕೂಡಿಬರುವುದು.
- ಆಧ್ಯಾತ್ಮ ಸಾಧನೆ ಮಾಡುವಿರಿ.
- ತೀರ್ಥಯಾತ್ರೆ ಹೋಗುವಿರಿ.

www.jyothishamithra.com

- ಪಿತ್ರಾರ್ಜಿತ ಆಸ್ತಿ ಲಭಿಸುವುದು.
- ಕೋಪ, ಹಠ ದೂರವಾಗಿ ಸಾತ್ವಿಕ ಮನಸ್ಸಿನವರಾಗುವಿರಿ.
- ಶತ್ರುಗಳು ಮಿತ್ರರಾಗುವರು.
- ಶೀತ, ಕಫ, ಜ್ವರದ ಸಮಸ್ಯೆಗಳಿಂದ ಬಳಲುವಿರಿ.
- ಹೊಸ ವ್ಯಾಪಾರ, ವ್ಯವಹಾರ ಆರಂಭಿಸುವಿರಿ.
- ವ್ಯಾಪಾರ, ವ್ಯವಹಾರ ಮಾಡುತ್ತಿರುವವರಿಗೆ ಅಧಿಕ ಲಾಭವಾಗುವುದು.

➢ ತಂದೆಯ ಆರೋಗ್ಯ ಸಮಸ್ಯೆಗಳು ನಿವಾರಣೆಯಾಗುವುದು.

➢ ಐಷಾರಾಮಿ ಸಾಮಾಗ್ರಿಗಳನ್ನು ಖರೀದಿಸುವಿರಿ.

# ಪರಿಹಾರ

www.jyothishamithra.com

- ದುರ್ಗಾ ಮಾತೆಯನ್ನು ಆರಾಧಿಸಬೇಕು.
- ಕಿರು ಬೆರಳಿಗೆ ಮುತ್ತು ರತ್ನವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.




# ಸಿಂಹರಾಶಿ



www.jyothishamithra.com

ಸಿಂಹ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ಪಂಚಮ ಮತ್ತು ಅಷ್ಟಮಾಧಿಪತಿಯಾಗಿರುವನು. ರಾಶ್ಯಾಧಿಪತಿ ರವಿ ಮತ್ತು ಗುರು ಮಿತ್ರರು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ದ್ವಾದಶ ಭಾವದಲ್ಲಿ ಸಂಚಾರ ಮಾಡುವನು. ಚತುರ್ಥ, ಷಷ್ಠ ಮತ್ತು ಅಷ್ಟಮ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

- ದೈವಾನುಗ್ರಹ(ಗುರುಬಲ) ಇಲ್ಲದಿರುವುದರಿಂದ ಖರ್ಚುವೆಚ್ಚ ಹೆಚ್ಚಾಗುವುದು.
- ಅನಾರೋಗ್ಯ ಸಮಸ್ಯೆಗಳು ದೂರವಾಗುವುದು.
- ಹೆಚ್ಚು ಸಾಲಮಾಡಿ ವಾಹನ / ಭೂಮಿ / ಗೃಹ ಖರೀದಿಸುವಿರಿ.
- ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು.
- ಶುಭ ಕಾರ್ಯಗಳಿಗೆ ಹೆಚ್ಚು ಧನ ವ್ಯಯವಾಗುವುದು.

- ಶತ್ರುಗಳು ಮಿತ್ರರಾಗುವರು.
- ಹಣಕಾಸು ಸಮಸ್ಯೆ ಎದುರಾಗುವುದರಿಂದ ಬ್ಯಾಂಕಿನಿಂದ ಸಾಲ ಪಡೆಯಲು ಪ್ರಯತ್ನಿಸುವಿರಿ.
- ಹೊಸ ಕೆಲಸ ಕಾರ್ಯಗಳಿಗೆ ಇದು ಸಕಾಲವಲ್ಲ.

# ಪರಿಹಾರ

www.jyothishamithra.com

- ಶಿವನನ್ನು ಆರಾಧಿಸಬೇಕು.
- ಉಂಗುರ ಬೆರಳಿಗೆ ಮಾಣಿಕ್ಯ ರತ್ನವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.

## ಕನ್ಯಾರಾಶಿ



ಕನ್ಯಾ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ಚತುರ್ಥ ಮತ್ತು ಸಪ್ತಮಾಧಿಪತಿಯಾಗಿರುವನು. ರಾಶ್ಯಾಧಿಪತಿ ಬುಧ ಮತ್ತು ಗುರು ಶತ್ರುಗಳು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ಏಕದಶಾ ಭಾವದಲ್ಲಿ ಸಂಚಾರ ಮಾಡುವನು. ತೃತೀಯ, ಪಂಚಮ ಮತ್ತು ಸಪ್ತಮ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

- ವಿಪರೀತ ಧನ ಲಾಭವಾಗುವುದು.
- ಕೌಟುಂಬಿಕ ಸಮಸ್ಯೆಗಳು ದೂರವಾಗುವುದು.
- ಆಧ್ಯಾತ್ಮ ಸಾಧನೆ ಮಾಡುವಿರಿ.
- ವಾಹನ / ಮನೆ / ಭೂಮಿ/ ಚಿನ್ನಾಭರಣ ಖರೀದಿಸುವಿರಿ.

www.jyothishamithra.com


- ಮಾತೃವಿನಿಂದ ಲಾಭವಾಗುವುದು.
- ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ವ್ಯಾಪಾರ / ವ್ಯವಹಾರ ಹೆಚ್ಚಾಗುವುದು.
- ಅನಾರೋಗ್ಯ ಸಮಸ್ಯೆಗಳು ದೂರವಾಗುವುದು.
- ಪಿತ್ರಾರ್ಜಿತ ಆಸ್ತಿ ಪ್ರಾಪ್ತಿಯಾಗುವುದು.

- ದೂರ ಪ್ರಯಾಣ ಮಾಡುವಿರಿ.
- ಮಾಡುತ್ತಿರುವ ವೃತ್ತಿಯಲ್ಲಿ ಧನಾತ್ಮಕವಾದ ಬದಲಾವಣೆಯಾಗುವುದು.
- ಶತ್ರುಗಳು ಮಿತ್ರರಾಗುವರು.
- ಕೊಟ್ಟ ಹಣ ನಿಮ್ಮ ಕೈ ಸೇರುವುದು.

# ಪರಿಹಾರ

www.jyothishamithra.com

- ವಿಷ್ಣು ದೇವರನ್ನು ಆರಾಧಿಸಬೇಕು.
- ಉಂಗುರ ಬೆರಳಿಗೆ ಪಚ್ಚೆ ರತ್ನವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.



# ತುಲಾ ರಾಶಿ



ತುಲಾ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ತೃತೀಯ ಮತ್ತು ಷಷ್ಟಾಧಿಪತಿಯಾಗಿರುವನು. ರಾಶ್ಯಾಧಿಪತಿ ಶುಕ್ರ ಮತ್ತು ಗುರು ಶತ್ರುಗಳು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ದಶಮ ಭಾವದಲ್ಲಿ ಸಂಚಾರ ಮಾಡುವನು. ದ್ವಿತೀಯಾ, ಚತುರ್ಥ ಮತ್ತು ಷಷ್ಟ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

- ಧನಲಾಭವಾಗುವುದು. ಆದರೆ ಖರ್ಚುವೆಚ್ಚ ಹೆಚ್ಚಾಗುವುದು.

www.jyothishamithra.com

- ವಾಹನ, ಭೂಮಿ, ಗೃಹ ಖರೀದಿಸುವಿರಿ.
- ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು.
- ನಿಮ್ಮ ಆರೋಗ್ಯ ಸನಸ್ಯೆಗಳು ದೂರವಾಗುವುದು.
- ಶತ್ರುಗಳು ಮಿತ್ರರಾಗುವರು.

- ಮಾತೃವಿನಿಂದ ಲಾಭವಾಗುವುದು.
- ಮಾಡುತ್ತಿರುವ ವೃತ್ತಿಯಲ್ಲಿ ಅಸಮಾಧಾನ ಉಂಟಾಗುವುದು.
- ಸಾಮಾಜಿಕ ಕಾರ್ಯಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳುವಿರಿ.
- ಆಧ್ಯಾತ್ಮಿಕ ವಿದ್ಯೆಗಳನ್ನು ಕಲಿಯಲು ಆಸಕ್ತಿ ಉಂಟಾಗುವುದು.
- ಸಂತಾನ ಇಲ್ಲದವರಿಗೆ ಸಂತಾನಯೋಗ ಕೂಡಿಬರುವುದು.

# ಪರಿಹಾರ

www.jyothishamithra.com

- ಮಹಾಲಕ್ಷ್ಮೀಯನ್ನು ಆರಾಧಿಸಬೇಕು.
- ಮಧ್ಯ ಬೆರಳಿಗೆ ವಜ್ರವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.


ಜ್ಯೋತಿಷ, ಪ್ರಶ್ನಶಾಸ್ತ್ರ ಮತ್ತು
ತಾಂಬೂಲ ಶಾಸ್ತ್ರ ತರಬೇತಿ
ಯಾವುದೇ ಸಮಯದ ನಿರ್ಬಂಧ ಇಲ್ಲದೇ,
ನೀವು ಇರುವಲ್ಲಿಂದಲೇ ಜ್ಯೋತಿಷ, ಪ್ರಶ್ನಶಾಸ್ತ್ರ,
ತಾಂಬೂಲ ಶಾಸ್ತ್ರ ಕಲಿಯಿರಿ.
ಒಟ್ಟು 80 ತರಗತಿಗಳು.
ಸರ್ಟಿಫಿಕೇಟ್
ನೀಡಲಾಗುವುದು.
ಶುಲ್ಕ
ರೂ.5000/-
Jyothisha
Mithra
ಸಂಪರ್ಕಿಸಿ : 9986671473 /9535283535
www.jyothishamithra.com

# ವೃಶ್ಚಿಕರಾಶಿ



ವೃಶ್ಚಿಕ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ದ್ವಿತೀಯ ಮತ್ತು ಪಂಚಮಾಧಿಪತಿಯಾಗಿರುವನು. ರಾಶ್ಯಾಧಿಪತಿ ಕುಜ ಮತ್ತು ಗುರು ಮಿತ್ರರು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ನವಮ ಭಾವದಲ್ಲಿ ಸಂಚಾರ ಮಾಡುವನು. ಜನ್ಮರಾಶಿ, ತೃತೀಯ ಮತ್ತು ಪಂಚಮ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

www.jyothishamithra.com

- ಭಾಗ್ಯೋದಯವಾಗುವುದು.
- ವಿವಾಹವಾಗಲು ಪ್ರಯತ್ನಿಸುತ್ತಿರುವವರಿಗೆ ವಿವಾಹಯೋಗ ಕೂಡಿಬರುವುದು.
- ಸಂತನ ಯೋಗವೂ ಕೂಡಿಬರುವುದು.
- ಧನಾಗಮನವಾಗುವುದು.
- ಆಧ್ಯಾತ್ಮ ಸಾಧನೆ ಮಾಡುವಿರಿ, ತೀರ್ಥಯಾತ್ರೆ ಹೋಗುವಿರಿ.
- ಸಾತ್ವಿಕ ಮನಸ್ಸಿನವರಾಗುವಿರಿ.
- ತಂದೆಯಿಂದ ಲಾಭವಾಗುವುದು.
- ಮಕ್ಕಳಿಂದ ಭಾಗ್ಯ ವೃದ್ಧಿಯಾಗುವುದು.

- ಜ್ಯೋತಿಷ, ವಾಸ್ತುಶಾಸ್ತ್ರ ಕಲಿಯಲು ಆಸಕ್ತಿ ಉಂಟಾಗುವುದು.

www.jyothishamithra.com

- ಸಹೋದರ / ಸಹೋದರಿಯರಿಗೆ ಒಳಿತಾಗುವುದು.
- ಐಷಾರಾಮಿ ಸಾಮಾಗ್ರಿಗಳನ್ನು ಖರೀದಿಸುವಿರಿ.

# ಪರಿಹಾರ

- ಸುಬ್ರಹ್ಮಣ್ಯ ಸ್ವಾಮಿಯನ್ನು ಆರಾಧಿಸಬೇಕು.
- ತೋರ್ ಬೆರಳಿಗೆ ಹವಳವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.



# ಧನುರಾಶಿ



ಧನು ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ರಾಶ್ಯಾಧಿಪತಿ ಮತ್ತು ಚತುರ್ಥಾಧಿಪತಿಯಾಗಿರುವನು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ದುಸ್ಥಾನವಾದ ಅಷ್ಟಮ ಭಾವದಲ್ಲಿ ಸಂಚಾರ ಮಾಡುವನು. ದ್ವಿತೀಯ, ಚತುರ್ಥ ಮತ್ತು ದ್ವಾದಶ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

www.jyothishamithra.com

- ಜೂಜು, ಶೇರು, ಲಾಟರಿಯಿಂದ ಧನ ಲಾಭವಾಗುವುದು.
- ರಹಸ್ಯ ವಿದ್ಯೆಗಳನ್ನು ಕಲಿಯುವಿರಿ.
- ನಿಮ್ಮ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಯಿದೆ.
- ನಿಮ್ಮ ಮೇಲೆ ವಿನಾಕಾರಣ ಅಪವಾದ ಉಂಟಾಗುವುದು.

- ಹೆಚ್ಚು ಖರ್ಚುಮಾಡಿ ಐಷಾರಾಮಿ ಸಾಮಾಗ್ರಿಗಳನ್ನು ಖರೀದಿಸುವಿರಿ.
- ತೀರ್ಥಯಾತ್ರೆ ಹೋಗುವಿರಿ.
- ನಿಮ್ಮ ತಾಯಿಯ ಆರೋಗ್ಯದ ಬಗ್ಗೆ ಗಮನಕೊಡಿ.
- ಶುಭಕಾರ್ಯಗಳನ್ನು ಆರಂಭಿಸಲು ಇದು ಸಕಾಲವಲ್ಲ.

# ಪರಿಹಾರ

www.jyothishamithra.com

- ರಾಘವೇಂದ್ರ ಸ್ವಾಮಿಯನ್ನು ಆರಾಧಿಸಬೇಕು.
- ತೋರ್ ಬೆರಳಿಗೆ ಕನಕಪುಷ್ಯ ರತ್ನವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.

# ಮಕರರಾಶಿ



ಮಕರ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ತೃತೀಯ ಮತ್ತು ದ್ವಾದಶಾಧಿಪತಿಯಾಗಿ ಅಶುಭನಾಗಿರುವನು. ರಾಶ್ಯಾಧಿಪತಿ ಶನಿ ಮತ್ತು ಗುರು ಮಿತ್ರರು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ಸಪ್ತಮ ಭಾವದಲ್ಲಿ ಸಂಚಾರ ಮಾಡುವನು. ಜನ್ಮರಾಶಿ, ತೃತೀಯ ಮತ್ತು ಏಕದಶಾ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

- ವಿವಾಹವಾಗುವ ಯೋಗವಿದ್ದರೂ ವಿಘ್ನಗಳು ಎದುರಾಗುವುದು.

www.jyothishamithra.com

- ವಾಹನ / ಭೂಮಿ /ಗೃಹ / ಚಿನ್ನಾಭರಣ ಖರೀದಿಸುವಿರಿ.
- ಹಲವು ಮೂಲಗಳಿಂದ ಧನ ಲಾಭವಾಗುವುದು.
- ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ವಿಪರೀತ ಧನಲಾಭವಾಗುವುದು.
- ಆಧ್ಯಾತ್ಮಿಕ ಸಾಧನೆ ಮಾಡುವಿರಿ.
- ದೂರ ಪ್ರಯಾಣ ಮಾಡುವಿರಿ.
- ಮಿತ್ರರಿಗೋಸ್ಕರ ಅಧಿಕ ಧನವ್ಯಯವಾಗುವುದು.
- ಸಹೋದರ / ಸಹೋದರಿಯರಿಗೆ ಶುಭವಾಗುವುದು.

- ಜ್ಯೋತಿಷಿ, ಗುರುಗಳಿಂದ ಸಲಹೆ ಪಡೆಯುವಿರಿ.
- ಮಾಡುತ್ತಿರುವ ವೃತ್ತಿಯಲ್ಲಿ ಧನಾತ್ಮಕವಾದ ಬದಲಾವಣೆಯಾಗುವುದು.

# ಪರಿಹಾರ

- ಆಂಜನೇಯ ಸ್ವಾಮಿಯನ್ನು ಆರಾಧಿಸಬೇಕು.
- ಮಧ್ಯದ ಬೆರಳಿಗೆ ನೀಲ ರತ್ನವನ್ನು ಧಾರಣೆ ಮಾಡಬೇಕು.

www.jyothishamithra.com

- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.



# ಕುಂಭರಾಶಿ



ಕುಂಭ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ದ್ವಿತೀಯ ಮತ್ತು ಏಕದಶಾಧಿಪತಿಯಾಗಿರುವನು. ರಾಶ್ಯಾಧಿಪತಿ ಶನಿ ಮತ್ತು ಗುರು ಮಿತ್ರರು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ದುಸ್ಥಾನವಾದ ಷಷ್ಠ ಭಾವದಲ್ಲಿ ಸಂಚಾರ ಮಾಡುವನು. ಜನ್ಮರಾಶಿಯಿಂದ ದ್ವಿತೀಯ, ದಶಮ ಮತ್ತು ದ್ವಾದಶಾ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

www.jyothishamithra.com

- ಆರೋಗ್ಯ ಸಮಸ್ಯೆಗಳು ದೂರವಾಗುವುದು.
- ಖರ್ಚುವೆಚ್ಚ ಹೆಚ್ಚಾಗುವುದು.
- ಮಾಡುತ್ತಿರುವ ವೃತ್ತಿಯಲ್ಲಿ ಧನಾತ್ಮಕವಾದ ಬದಲಾವಣೆ ಆಗುವುದು.
- ಧಾರ್ಮಿಕ ಕಾರ್ಯಗಳಿಗೆ ಅಧಿಕ ಧನವ್ಯಯ

ಮಾಡುವಿರಿ.

- ಸಾತ್ವಿಕ ಮನಸ್ಸಿನವರಾಗುವಿರಿ.
- ವಾಕ್‌ಸಿದ್ಧಿಯಾಗುವುದು.

www.jyothishamithra.com

- ಕುಟುಂಬದವರೊಡನೆ ವಿನಾಕಾರಣ ಕಲಹ ಉಂಟಾಗುವುದು,
- ನಿಮ್ಮವರೇ ನಿಮಗೆ ಶತ್ರುಗಳಾಗುವರು.
- ರಾಜಕಾರಣಿಗಳಿಗೆ ಅಧಿಕಾರ ಪ್ರಾಪ್ತಿಯಾಗುವುದು.
- ಸಮಾಜದ ಗೌರವಕ್ಕೆ ಪಾತ್ರರಾಗುವಿರಿ.

## ಪರಿಹಾರ

- ಆಂಜನೇಯ ಸ್ವಾಮಿಯನ್ನು ಆರಾಧಿಸಬೇಕು.
- ಮಧ್ಯದ ಬೆರಳಿಗೆ ನೀಲ ರತ್ನವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.

# ಮೀನರಾಶಿ

www.jyothishamithra.com

ಮೀನ ರಾಶಿಯಲ್ಲಿ ಜನಿಸಿದವರಿಗೆ ಗುರುಗ್ರಹ ರಾಶ್ಯಾಧಿಪತಿ ಮತ್ತು ದಶಮಾಧಿಪತಿಯಾಗಿರುವನು. ಗುರುಗ್ರಹ ಉಚ್ಚನಾಗಿ ಜನ್ಮರಾಶಿಯಿಂದ ಪಂಚಮ ಭಾವದಲ್ಲಿ ಸಂಚಾರ ಮಾಡುವನು. ಜನ್ಮರಾಶಿ, ನವಮ ಮತ್ತು ಏಕಾದಶಾ ಭಾವಗಳನ್ನು ತನ್ನ ಶುಭ ದೃಷ್ಟಿಯಿಂದ ವೀಕ್ಷಿಸುವನು.

- ಭಾಗ್ಯೋದಯವಾಗುವುದು.
- ಕೈಹಾಕಿದ ಎಲ್ಲಾ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುದು.
- ಸಾತ್ವಿಕ ಮನಸ್ಸಿನವರಾಗುವಿರಿ.
- ವಾಹನ, ಭೂಮಿ, ಗೃಹ, ಚಿನ್ನಾಭರಣಗಳನ್ನು ಖರೀದಿಸುವಿರಿ.

- ವಿವಾಹವಾಗಲು ಪ್ರಯತ್ನಿಸುತ್ತಿರುವವರಿಗೆ ವಿವಾಹಯೋಗ, ಮಕ್ಕಳಾಗಲು ಬಯಸುತ್ತಿರುವವರಿಗೆ ಸಂತಾನಯೋಗ ಕೂಡಿಬರುವುದು.
- ದೇವರಲ್ಲಿ ವಿಶೇಷವಾದ ಭಕ್ತಿ ಉಂಟಾಗುವುದು.
- ಜ್ಯೋತಿಷ, ವಾಸ್ತುಶಾಸ್ತ್ರ ಕಲಿಯಲು ಆಸಕ್ತಿ ಉಂಟಾಗುವುದು.

www.jyothishamithra.com

- ತಂದೆಯಿಂದ ಲಾಭವಾಗುವುದು.
- ಮಾಡುತ್ತಿರುವ ವೃತ್ತಿಯಲ್ಲಿ ಧನಾತ್ಮಕವಾದ ಬದಲಾವಣೆಯಾಗುವುದು.
- ಅಧಿಕ ಧನ ಲಾಭವಾಗುವುದು.
- ತೀರ್ಥಯಾತ್ರೆ ಹೋಗುವಿರಿ.
- ಸುಖ, ಶಾಂತಿ, ನೆಮ್ಮದಿ ನಿಮ್ಮನ್ನು ಹಿಂಬಾಲಿಸುವುದು.
- ಶೀತ, ಕಫ, ಜ್ವರ ನಿಮ್ಮನ್ನು ಬಾಧಿಸುವುದು.

# ಪರಿಹಾರ

- ರಾಘವೇಂದ್ರ ಸ್ವಾಮಿಯನ್ನು ಆರಾಧಿಸಬೇಕು.

- ತೋರ್ ಬೆರಳಿಗೆ ಕನಕಪುಷ್ಯ ರತ್ನವನ್ನು ಧಾರಣೆ ಮಾಡಬೇಕು.
- ಪ್ರತಿದಿನ ಬೆಳಗ್ಗೆ ಗುರುಬೀಜ ಮಂತ್ರವನ್ನು ಜಪಿಸಬೇಕು.

---

## ಗುರು ಬೀಜಮಂತ್ರ

ಗ್ರಾಂ ಗ್ರೀಂ ಗ್ರೌಂ ಸಃ ಗುರವೇ ನಮಃ

## ಗುರು ಗಾಯತ್ರಿ ಮಂತ್ರ

www.jyothishamithra.com

ಓಂ ವಾಚಸ್ಪತಾಯ ವಿದ್ಮಯೇ ।
ಬುದ್ಧಿ ಮೂಲಾಯ ಧೀಮಹೀ ।
ತನ್ನೋ ಗುರುಃ ಪ್ರಚೋದಯಾತ್ ॥

ಸರ್ವೇ ಜನಾಃ ಸುಖಿನೋ ಭವಂತು





ಜ್ಯೋತಿಷ ಮಿತ್ರ ಪ್ರಸ್ತುತಪಡಿಸುತ್ತಿದೆ.
ಡಿಜಿಟಲ್ ಜ್ಯೋತಿಷ ಕ್ಲಾಸ್
ಈಗ ಜನಸಾಮಾನ್ಯರೂ
ಜ್ಯೋತಿಷಶಾಸ್ತ್ರವನ್ನು ಕಲಿಯುತ್ತಿದ್ದಾರೆ.
ಯಾವುದೇ ಸಮಯದ ನಿರ್ಬಂಧ ಇಲ್ಲದೇ
ನೀವು ಇರುವಲ್ಲಿಂದಲೇ
ಜ್ಯೋತಿಷಶಾಸ್ತ್ರ ಕಲಿಯಿರಿ.
ವಿಶೇಷ
ರಿಯಾಯಿತಿ ಶುಲ್ಕ
1250/-
ರಿಜಿಸ್ಟ್ರೇಷನ್ ಮಾಡಲು ಕರೆಮಾಡಿ
9986671473 / 9535283535
Jyothisha Mithra
www.jyothishamithra.com




ಜಾತಕ ಸಾಫ್ಟ್‌ವೇರ್
ಲ್ಯಾಪ್ ಟಾಪ್ / ಡೆಸ್ಕ್ ಟಾಪ್ / ಮೊಬೈಲ್‌ಗಳಿಗೆ
ರೂ.3300/- ರಿಂದ ಆರಂಭ
Upto 20% ಡಿಸ್ಕೌಂಟ್


ಪೆಂಡ್ಯೂಲಮ್ ಡೌಸಿಂಗ್
ತರಬೇತಿ ಕಿಟ್
ವಿದ್ಯೆ, ಹಣಕಾಸು, ಉದ್ಯೋಗ,
ಪ್ರೀತಿ ಪ್ರೇಮ, ವಿವಾಹ, ಆರೋಗ್ಯ,
ವ್ಯವಹಾರ, ಪ್ರೇತಬಾಧೆ, ವಾಮಾಚಾರ,
ಜಲಶೋಧನೆ ಮುಂತಾದ ಎಲ್ಲಾ ರೀತಿಯ
ಅಗೋಚರ ವಿಷಯಗಳನ್ನು
ತಿಳಿಯಲು ಕಲಿಯಿರಿ
ಪೆಂಡ್ಯೂಲಮ್ ಡೌಸಿಂಗ್
ರೂ. 1500/- ಮಾತ್ರ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9986671473 / 9535283535
Jyothisha Mithra
www.jyothishamithra.com


ಜ್ಯೋತಿಷ ಕಲಿಕಾಸಕ್ತರಿಗಾಗಿ 'ಜ್ಯೋತಿಷ ಮಿತ್ರ'
ಸಂಸ್ಥೆಯು ಹೊರತಂದಿದೆ
'ಜ್ಯೋತಿಷ ಫಲ ಸಂಗ್ರಹ'
ಗ್ರಂಥವನ್ನು
(ಪಂಚಾಂಗ, ಜಾತಕ ವಿಮರ್ಶೆ, ಜಾತಕ ಹೊಂದಾಣಿಕೆ,
ಶುಭ ಮುಹೂರ್ತ, ಸಂಖ್ಯಾಶಾಸ್ತ್ರ, ಪ್ರಶ್ನಶಾಸ್ತ್ರ)
ರೂ.1250/-
ರಿಯಾಯಿತಿ ದರ
ರೂ.950/-
ಮಾತ್ರ
ಜ್ಯೋತಿಷ ಫಲ ಸಂಗ್ರಹ
Jyothisha Mithra





# ಜ್ಯೋತಿಷ ಮಿತ್ರ ಆನ್ಲೈನ್ ದಿನಪತ್ರಿಕೆ

ಗೌರವ ಸಂಪಾದಕರು : ಜೀವನ್ ಉಳ್ಳಾಲ್

ಸಂಪಾದಕರು : ಶ್ರೀಷ ಎಸ್.

ಕಚೇರಿ ವಿಳಾಸ: ಪತ್ತಾರ್ ಕಾಂಪ್ಲೆಕ್ಸ್, ಹೊಸಬೆಟ್ಟು, ಮಂಗಳೂರು-575019.

ಸಂಪರ್ಕಿಸಿ 9986671473 / 9535283535

www.jyothishamithra.com